	ತಾಲ್ಲೂಕಿನ ಹೆಸರು	ನೆಡುತೋಪು ನಿರ್ಮಾಣ (ಹೆ.ಗಳಲ್ಲಿ)		
		1992-93	1993-94	1994-95
1)	ಬಾದಾಮಿ	130.0	227.0	136.0
2)	ಬಾಗಲಕೋಟೆ	157.0	69.0	101.0
3)	ಬಸವನ ಬಾಗೇವಾಡಿ	66.0	92.0	164.5
4)	ವಿಜಾಪುರ	37.0	115.0	115.0
5)	ಬೀಳಗಿ	100.0	102.5	200.0
6)	ಹುನಗುಂದ	272.5	370.5	352.5
7)	ಇಂಡಿ	12.0	121.5	70.0
8)	ಜಮಖಂಡಿ	133.0	143.5	34.5
9)	ಮುದ್ದೇಬಿಹಾಳ	14.0	45.5	77.0
10)	ಮುಧೋಳ	55.0	57.5	89.5
11)	ಸಿಂದಗಿ	29.0	25.5	55.0
	ಒಟ್ಟು	**1005.5**	**1369.5**	**1395.0**

ಇ) ವಿಜಾಪುರ ನಗರದ ಜನತೆ ತಮ್ಮ ಮನೆ ಮುಂದೆ ಅವರ ಸ್ವಂತ ಜಾಗದಲ್ಲಿ ಮರಗಳನ್ನು ಬೆಳೆಸಲು ಮುಂದಾದರೆ ಅರಣ್ಯ ಇಲಾಖೆಯಲ್ಲಿರುವ ಸಸ್ಯ ಕ್ಷೇತ್ರಗಳಿಂದ ಇಲಾಖೆಯು ನಿಗದಿಪಡಿಸಿರುವ ದರಗಳಲ್ಲಿ ಸಸಿಗಳನ್ನು ನೀಡಲಾಗುವುದು. ಇದಲ್ಲದೆ ಪ್ರೋತ್ಸಾಹ ಎಂಬ ಹೊಸ ಯೋಜನೆಯಡಿಯಲ್ಲಿ ಸಾರ್ವಜನಿಕರು: ರೈತರು ತಮ್ಮ ಜಮೀನಿನಲ್ಲಿ ನೆಟ್ಟು 3 ವರ್ಷಗಳವರೆಗೆ ಪ್ರೊತ್ಸಾಹ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಇದನ್ನು 5 ವರ್ಷದವರೆಗೆ ವಿಸ್ತರಿಸುವ ಪ್ರಸ್ತಾವನೆ ಇದೆ.

ಮಾಗಡಿ ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕೊರತೆ.

2226 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರುಗಳ ಕೊರತೆ ಎಷ್ಟಿದೆ

ಆ) ಈ ಖಾಲಿ ಇರುವ ಶಿಕ್ಷಕರುಗಳನ್ನು ಶೀಘ್ರದಲ್ಲಿಯೇ ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಇ) *ಈ ಶಾಲೆಯಲ್ಲಿ ಇರುವ ಹಿಂದಿ ಮಾಧ್ಯಮದ ಹಾಗೂ ದೈಹಿಕ ಶಿಕ್ಷಕರ ಎಷ್ಟು ಹುದ್ದೆಗಳು ಪ್ರಸ್ತುತ ಖಾಲಿ ಇವೆ?*

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ. ಪ್ರಾಥಮಿಕ ಶಾಲಾಶಿಕ್ಷಕರು - 70

ಪ್ರೌಢಶಾಲಾ ಶಿಕ್ಷಕರು - 23

ಆ. ಕೈಗೊಳ್ಳುವುದು.

ಇ. ಪ್ರಾಥಮಿಕ ಶಾಲೆಗಳಲ್ಲಿ - 4 ಹಿಂದೀ ಶಿಕ್ಷಕರ ಹುದ್ದೆ ಖಾಲಿ ಇವೆ.

- ದೈಹಿಕ ಶಿಕ್ಷಕರ ಹುದ್ದೆ ಖಾಲಿ ಇರುವುದಿಲ್ಲ.

ಸರಕಾರಿ ಪ್ರೌಢಶಾಲೆಗಳಲ್ಲಿ - 2 ಹಿಂದೀ ಶಿಕ್ಷಕರ ಹುದ್ದೆ ಖಾಲಿ ಇವೆ.

- 3 ದೈಹಿಕ ಶಿಕ್ಷಕರ (ಗ್ರೇಡ್ -1) ಹುದ್ದೆ ಖಾಲಿ ಇವೆ.

ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿ.

2227 - ಶ್ರೀ ಎಂ. ಚಂದ್ರಪ್ಪ (ಭರಮಸಾಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಸಾವಿರಾರು ರೋಗಿಗಳ ಆಸ್ಪತ್ರೆಯಾಗಿದ್ದು ಸುಮಾರು 20 ವರ್ಷಗಳಿಂದ ಅಭಿವೃದ್ಧಿ ಪಡಿಸದೆ ಹೆಚ್ಚುವರಿ ವಾರ್ಡಗಳನ್ನು ಕಟ್ಟದೆ ಇರುವುದರಿಂದ ಹಾಗೂ ಈ ನಗರದ ಮಧ್ಯ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ 4 ಹಾಗೂ 16 ಹಾದುಹೋಗುತ್ತಿರುವುದರಿಂದ ಅಪಘಾತಗಳು ಜಾಸ್ತಿಯಾಗುತ್ತಿದ್ದು ಬಹಳಷ್ಟು ರೋಗಿಗಳಿಗೆ ಸರಿಯಾದ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಸದರಿ ಆಸ್ಪತ್ರೆಗಳಿಗೆ ಹೊಂದಿಕೊಂಡಂತೆ 10 ಎಕರೆ ಪ್ರದೇಶವಿದ್ದು ಇಲ್ಲಿ ಆಧುನಿಕ ರೀತಿಯಲ್ಲಿ ಹೆಚ್ಚುವರಿ ವಾರ್ಡುಗಳನ್ನು ಕಟ್ಟಲು ಉದ್ದೇಶವೇನಾದರೂ ಇದೆಯೇ?*

ಇ) *ಇದ್ದಲ್ಲಿ ಯಾವ ಸಾಲಿನಿಂದ ಕಟ್ಟಡವನ್ನು ಕಟ್ಟಲು ಉದ್ದೇಶಿಸಲಾಗಿದೆ?*

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಇಲ್ಲ.

ಇ) ಮುಖ್ಯ ವಾಸ್ತು ಶಿಲ್ಪಗಳಿಂದ ನಕ್ಷೆ ತಯಾರಿದ್ದು ಈ ಸಾಲಿನಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸಲು ಉದ್ದೇಶಿಸಿದೆ.